# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 336 |
| **ಸದಸ್ಯರ ಹೆಸರು** | ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) |
| **ಉತ್ತರಿಸಬೇಕಾದ ದಿನಾಂಕ** | 07.07.2023 |
| **ಉತ್ತರಿಸಬೇಕಾದ ಸಚಿವರು** | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಪ್ರಶ್ನೆ | ಉತ್ತರ |
|---|---|
| ಅ) ಮೊಬೈಲ್‌ಗಳಲ್ಲಿ ವಿವಿಧ ಅಪ್ಲಿಕೇಶನಗಳನ್ನು ಡೌನ್‌ಲೋಡ್ ಮಾಡುವಾಗ ಆಪ್‌ನ್ನು ಅಭಿವೃದ್ಧಿಪಡಿಸುವವರು ಗ್ಯಾಲರಿ ಸಂಪರ್ಕಗಳ ಹಾಗೂ ಇನ್ನಿತರ ಕ್ಷೇತ್ರಕ್ಕೆ ಪ್ರವೇಶಿಸಲು ಅನುಮತಿ ಬಯಸುತ್ತಿರುವುದರಿಂದ ಖಾಸಗಿತನಕ್ಕೆ ಭಂಗವುಂಟಾಗುತ್ತಿರುವುದು ಮತ್ತು ಇನ್ನಿತರ ಅಕ್ರಮ ಚಟುವಟಿಕೆಗಳಿಗೆ ಅವಕಾಶವಾಗುತ್ತಿರುವುದನ್ನು ನಿರ್ಬಂಧಿಸಲು ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಿದೆ: | ಚಂದಾದಾರರು/ ಬಳಕೆದಾರರು ಇತರ ಅಪ್ಲಿಕೇಶನ್‌ಗಳು/ಆಪ್‌ಗಳ ಗ್ಯಾಲರಿ ಪ್ರವೇಶಕ್ಕೆ ಅನುಮತಿ ನೀಡಿದರೆ ಮಾತ್ರ, ಚಂದಾದಾರರ/ಬಳಕೆದಾರರ ಡೇಟಾದ ಗೌಪ್ಯತೆಗೆ ಧಕ್ಕೆಯುಂಟಾಗುತ್ತದೆ. ಇತರ ಅಪ್ಲಿಕೇಶನ್‌ಗಳಿಗೆ ಪ್ರವೇಶವನ್ನು ಹೊಂದಲು ಚಂದಾದಾರರು/ಬಳಕೆದಾರರು ಅನುಮತಿಯನ್ನು ನಿರಾಕರಿಸಬಹುದು.<br><br>ದೇಶದ ನಾಗರೀಕರ ಗೌಪ್ಯತೆಯನ್ನು ರಕ್ಷಿಸಲು ಕೇಂದ್ರ ಸರ್ಕಾರದಿಂದ ವಿವಿಧ ಭಾಗೀದಾರರನ್ನು ಸಂಪರ್ಕಿಸಿದ ನಂತರ **"ಡಿಜಿಟಲ್ ವೈಯಕ್ತಿಕ ಡೇಟಾ ಸಂರಕ್ಷಣಾ "** ಮಸೂದೆಯನ್ನು ರಚಿಸಲಾಗುತ್ತಿದೆ ಎಂದು ತಿಳಿದು ಬಂದಿದೆ. |
| ಆ) ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರದೊಂದಿಗೆ ಯಾವ ರೀತಿ ವ್ಯವಹರಿಸುತ್ತಿದೆ: | |
| ಇ) ಬೆಂಗಳೂರು ಐಟಿ ಕ್ಷೇತ್ರದ ಕೇಂದ್ರವಾಗಿರುವುದರಿಂದ ಈ ಸಮಸ್ಯೆಯನ್ನು ಪರಿಹರಿಸಲು ಸಂಬಂಧಪಟ್ಟವರೊಂದಿಗೆ ಸರ್ಕಾರ ಸಮಾಲೋಚಿಸುವುದೇ? (ವಿವರ ಒದಗಿಸುವುದು) | |

ಐಟಿಬಿಟಿ 49 ಎಲ್ ಸಿಎಂ 2023

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ
ತಂತ್ರಜ್ಞಾನ ಸಚಿವರು.